ದರದಲ್ಲಿ ವಿದ್ಯಾರ್ಥಿಗಳಿಗೆ ಸಿಗಬೇಕಂಬ ದೃಷ್ಟಿಯಿಂದ ಸೇಲ್ಸ್ ಇಂಟರ್‌ನ್ಯಾಷನಲ್ ಸಂಸ್ಥೆ ಪ್ರಕಟಿಸುತ್ತಿದೆ. ಅದು ಬ್ಲಾಕ್ ಮಾರ್ಕೆಟ್ಟಿಗೆ ಹೋಗಲು ಅವಕಾಶವಾಗದೆ ಅದರ ಮೇಲೆ ನಮೂದಿಸಿದ ಬೆಲೆಗೆ ಮಕ್ಕಳಿಗೆ ಸಿಗುವಂತಾಗಬೇಕೆಂಬ ಬಗ್ಗೆ ವಿಚಾರ ಮಾಡಿದ್ದೇವೆ. I have also suggested whether the Sales International cannot take up this matter to file a criminal complaint against this institute for doing this sort of cheating. I will pursue that matter with the department. ಇನ್ನು ತಾವು ಏನು ಪಠ್ಯ ಪುಸ್ತಕಗಳು ಮೂವತ್ತೂ ಆಗಿಲ್ಲವೆಂದು ತಿಳಿಸಿದ್ದೀರಿ, ಅದನ್ನು ನಾನು ಒಂದು ಲಿಸ್ಟ್ ಮಾಡಿ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.— ಪುಸ್ತಕದ ಬೆಲೆಯೂ ಕೂಡ ಜಾಸ್ತಿ ಇದೆ. ಅದರ ಬಗ್ಗೆ ಪರಿಶೀಲನೆ ಮಾಡಬೇಕು.

SRI B. SUBBAIAH SHETTY,—Prices of the books are still subsidised.

ಶ್ರೀ ಟಿ. ಆರ್. ಶಾಮಣ್ಣ.— ಕೇವಲ ೪೮ ಪುಟ ಇರತಕ್ಕಂತಹ ಪುಸ್ತಕಕ್ಕೆ ನಾಲ್ಕೂವರೆ ರೂಪಾಯಿ ಸರಿಯೆ ?

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಅದರ ಬಗ್ಗೆಯೂ ಕೂಡ ನಾನು ಹೇಳಿದ್ದೇನೆ. ಸ್ವಲ್ಪ ಕಡಿಮೆ ಪುಟದ ಪುಸ್ತಕಗಳು ಹೆಚ್ಚು ಪ್ರಮಾಣದಲ್ಲಿ ಪ್ರಿಂಟ್ ಆದರೆ ಬೆಲೆ ನ್ಯಾಚುರಲ್ ಆಗಿ ಕಡಿಮೆಯಾಗುತ್ತದೆ. ಕೇವಲ ೩-೪ ಸಾವಿರ ಪ್ರತಿಗಳು ಪ್ರಿಂಟ್ ಆಗುವುದರಿಂದ ಬೆಲೆ ಸ್ವಲ್ಪ ಜಾಸ್ತಿಯಾಗಿದೆ. ಆದ್ದರಿಂದ ಇಂಥ ಸಂದರ್ಭದಲ್ಲಿ ಇಂತಹ ಪುಸ್ತಕಗಳಿಗೆ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಒಬ್ಬರು ಮಾನ್ಯ ಸದಸ್ಯರು.— ಕೇವಲ ೩-೪ ಸಾವಿರ ಪ್ರತಿಗಳು ಪ್ರಿಂಟ್ ಆದರೂ ಕೂಡ ೪೮ ಪುಟದ ಪುಸ್ತಕಕ್ಕೆ ನಾಲ್ಕೂವರೆ ರೂಪಾಯಿ ಆಗುವುದಿಲ್ಲ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.— ಈ ಲೇಖಿಕ ಪುಸ್ತಕಗಳನ್ನು ಕೇರಳಕ್ಕೆ ಸಾಗಿಸಿ ಅಲ್ಲಿ ಮಾರಾಟ ಮಾಡುತ್ತಿರುವುದರಿಂದ ಇಲ್ಲಿ ಅಭಾವ ಉಂಟಾಗಿದೆ. ಅದನ್ನು ಸ್ವಲ್ಪ ಚೆಕ್‌ಅಪ್ ಮಾಡಿ.

ಶ್ರೀ ಪಿ. ರಾಮದೇವ್.— ಪಠ್ಯಪುಸ್ತಕಗಳ ಅಭಾವವೂ ಕೂಡ ಇದೆ, ಸಾಕಷ್ಟು ಪಠ್ಯಪುಸ್ತಕಗಳು ದೊರೆಯುತ್ತಿಲ್ಲ. ಕೆಲವು ಮಾರಾಟಗಾರರು ಆ ಪುಸ್ತಕಕ್ಕೆ ಸಂಬಂಧಪಟ್ಟ ಗೈಡನ್ನು ಕೊಂಡುಕೊಳ್ಳುವುದಾದರೆ ಮಾತ್ರ ಪಠ್ಯಪುಸ್ತಕಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಅದನ್ನು ತಪ್ಪಿಸಬೇಕು.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ.— ತಾವು ಏನು ಲೇಖಿಕ ಪುಸ್ತಕದ ಬಗ್ಗೆ ಹೇಳಿದ್ದೀರಿ ಅದನ್ನು ಪರಿಶೀಲಿಸುತ್ತೇನೆ. ಆ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳೂಡನೆಯೂ ಕೂಡ ಸಮಾಲೋಚಿಸುತ್ತೇನೆ. ನಿನ್ನೆ ನಾನು incognito ಹಿಗೆನ್ಸ್ ಬಾತಮ್ ಎಂಬ ಒಂದು ಪುಸ್ತಕದ ಅಂಗಡಿಯಲ್ಲಿ ನೋಡಿದಾಗ ಸುಮಾರು ಒಂದಿಷ್ಟು (ಕೈ ತೋರಿಸಿ ಹೇಳಿದರು) ಲೇಖಿಕ ಪುಸ್ತಕಗಳಿದ್ದವು. ಆದರೆ ಬಾಕಿ ಕಡೆ ನೋಡುವುದಕ್ಕಾಗಲಿಲ್ಲ. ಅಲ್ಲಿ ಮಾತ್ರ ಆ ಪುಸ್ತಕಗಳನ್ನು ಮಾರುತ್ತಿದ್ದರು. ಅಂಥ ಅಭಾವ ಇದೆಯೋ ಇಲ್ಲವೋ ಎಂದು ನಿರ್ಧಾರ ಮಾಡುವುದಕ್ಕೆ ಆಗಲಿಲ್ಲ. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಪುಸ್ತಕಗಳು ಸಿಗಬಹುದು. ಒಂದು ವೇಳೆ ಏನಾದರೂ ಸಾಕಷ್ಟು ಪುಸ್ತಕಗಳು ದೊರೆಯದಿದ್ದರೆ ಖಂಡಿತ ಅದನ್ನು ಸೆಟ್‌ರೈಟ್ ಮಾಡುತ್ತೇನೆ.

## KSRTC buses spared for election purposes

SRI M. V. RAJASHEKHARAN (Uttarahalli).—I had given a notice requesting permission to raise this particular issue. With regard to the recent Press report that the K S. R. T. C. is to spare some vehicles for election purpose thereby denying transport facilities to the people of rural areas. In the last Taluk Board election also KSRTC

made available number of buses for election purpose. With the result people suffrered to great extent on account of the incovenience caused. Similarly, they are sparing buses on 6th, 7th and 8th of this month for election purpose. I would like to get an assurance from the Minister whether they have made any alternative arrangements for the travelling public so that the inconvenience is not caused to them. Whether the Hon'ble Minister will give careful consideration and immediate action is taken in this matter because, this is a very serious mattes. I request that Minister to give an assurance to the House and see that no inconvenience is caused to the general public.

ಶ್ರೀ ಆರ್. ಗುಂಡೂರಾವ್.—ಮಾನ್ಯ ರಾಜಶೇಖರಮೂರ್ತಿಯವರು ಪಂಚಾಯಿತಿ ಚುನಾವಣೆಗೋಸ್ಕರ ಕೆ. ಎಸ್. ಆರ್. ಟಿ.ಸಿ. ಯವರು ಬಸ್ಸುಗಳನ್ನು ಕೊಟ್ಟಿರುವ ಬಗ್ಗೆ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಈಗ ಅದು ಹೊಸದಾಗಿ ಕೊಡತಕ್ಕಂತಹ ವಿಚಾರ ವೇನು ಅಲ್ಲ. ಏಕೆಂದರೆ ಯಾವ ಚುನಾವಣೆ ಬಂದರೂ ಕೂಡ, ಅದು ಲೋಕಸಭಾ ಚುನಾವಣೆಯಾಗಲಿ, ವಿಧಾನಸಬಾ ಚುನಾವಣೆಯಾಗಲಿ, ತಾಲ್ಲೂಕು ಬೋರ್ಡ್ ಚುನಾವಣೆಯಾಗಲಿ, ಯಾವುದೇ ಚುನಾವಣೆಯಾಗಲಿ, ಆ ಸಮಯದಲ್ಲಿ ಚುನಾವಣಾ ಕಮೀಷನರ್‌ರವರು ಚುನಾವಣೆಗೆ ಸಂಬಂಧಪಟ್ಟ ಸಿಬ್ಬಂದಿವರ್ಗದವರನ್ನು ಒಯ್ಯಲಿಕ್ಕೆ ಬಸ್ಸುಗಳನ್ನು ತೆಗೆದುಕೊಳ್ಳುವ ಅಧಿಕಾರ ಅವರಿಗೆ ಇದೆ. ಅವರು ಜಿಲ್ಲಾ ಮ್ಯಾಜಿಸ್ಟ್ರೇಟರ ಮೂಲಕ ಕೆ.ಎಸ್.ಆರ್. ಟಿ.ಸಿ.ಯ ಬಸ್ಸುಗಳನ್ನಾಗಲೀ ಅಥವಾ ಖಾಸಗೀ ಬಸ್ಸುಗಳನ್ನಾಗಲೀ ಚುನಾವಣೆಯಂ ಪ್ರಯುಕ್ತ ತೆಗೆದುಕೊಳ್ಳುವುದು ಸ್ವಾಭಾವಿಕ. ಕಳೆದ ಸಾರಿ ನಡೆದಂತಹ ಪಾರ್ಲಿಮೆಂಟ್ ಚುನಾವಣೆಗೆ ಸುಮಾರು ೧೨೪೪ ಬಸ್ಸುಗಳನ್ನು ಕೆ. ಎಸ್. ಆರ . ಟಿ. ಸಿ. ಯವರಿಂದ ತೆಗೆದುಕೊಳ್ಳಲಾಗಿತ್ತು, ೧೯೭೮ರಲ್ಲಿ ನಡೆದ ವಿಧಾನ ಸಭಾ ಚುನಾವಣೆಗೆ ೧೫೯೪ ಬಸ್ಸುಗಳನ್ನು ತೆಗೆದುಕೊಳ್ಳಲಾಗಿತು, ಹಾಗೂ ಮೊನ್ನೆ ನಡೆದ ತಾಲ್ಲೂಕು ಬೋರ್ಡ್ ಚುನಾವಣೆಗೂ ಕೂಡ ೧೦೩೨ ಬಸ್ಸುಗಳನ್ನು ತೆಗೆದುಕೊಳ್ಳಲಾಗಿತ್ತು. ಹೀಗೆ ಬಸ್ಸುಗಳನ್ನು ತೆಗೆದುಕೊಂಡು ಸಿಬ್ಬಂದಿ ವರ್ಗವನ್ನು ಕರೆದೊಯ್ದು ಚುನಾವಣೆ ಮುಗಿದ ನಂತರ ವಾಪಸ್ಸು ಬರುವ ಪದ್ಧತಿ ಇದೆ. ಅದೇ ರೀತಿ ಈ ಪಂಚಾಯಿತಿಯ ಚುನಾವಣೆಗೂ ಕೂಡ ಸುಮಾರು ಒಂದು ಸಾವಿರ ಬಸ್ಸುಗಳು ಬೇಕೆಂದು ಕೇಳಿದ್ದಾರೆ. ಅದನ್ನು ಕೊಡಲೇ ಬೇಕು, ಕೊಡದೆ ಬೇರೆ ದಾರಿ ಇಲ್ಲ. ಹೀಗಿರ ಬೇಕಾದರೆ ಅದಕ್ಕೆ ಯಾವ ರೀತಿ ಅಲ್ಟರ್‌ನೇಟೀವ್ ಅರೇಂಜ್‌ಮೆಂಟ್ ಮಾಡಲು ಸಾಧ್ಯತೆ ಇದೆ ಎಂಬುದನ್ನು ಮಾನ್ಯ ಸದಸ್ಯರು ಸೂಚಿಸಿದರೆ ಅದನ್ನು ನಾನು ಮಾಡಲು ಸಿದ್ಧನಿದ್ದೇನೆ.

SRI M. V. RAJASHEKHARAN.—The K.S.R.T.C. is already in shorage of buses. The Minister was telling that this was the practice previously also. That doesn't mean that you have to perpetuate the mistake committed by the KSRTC previously. Let them comandeer large number of private fleets and they can also commandeer vehicles from Military. My intention is that the public should not be put into difficulties. During the Taluk Board election of three days public went under great strain and they were not able to go from one place to another. The same thing is happening today, tomorrow and day after tomorrow. I request the Minister to commandeer the private fleet and also military to make the transport facilities from election but not the KSRTC buses.

ಶ್ರೀ ಆರ್. ಗುಂಡೂರಾವ್.—ಮಿಲಿಟರಿಯವರ ಹತ್ತಿರ ಬಸ್ಸುಗಳಿಲ್ಲ, ಲಾರಿಗಳು ಇರಬಹುದು. ಅದು ಡಿಫೆನ್ಸ್ ಉದ್ದೇಶಕ್ಕೋಸ್ಕರ ಇರುವುದು. ಅದನ್ನು ನಾವು ಕೊಡುತ್ತೇವೆಂದು ಭರವಸೆ ಕೊಡುವುದಕ್ಕಾಗುವುದಿಲ್ಲ, ಅದು ರಕ್ಷಣಾ ಇಲಾಖೆಗೆ ಸೇರಿರುತ್ತದೆ. ಎರಡನೆಯದಾಗಿ, ಸಿಬ್ಬಂದಿ ವರ್ಗ

ದವರು ಚುನಾವಣಾ ಸಮಯದಲ್ಲಿ ಲಾರಿಗಳಲ್ಲಿ ಹೋಗಲಿ ತಯಾರಾಗಿರುತ್ತಾರಾ? ಒಂದು ವೇಳೆ ಮಿಲಿಟರಿಯವರು ಲಾರಿಗಳನ್ನು ಕೊಟ್ಟರೆ ಅವರ ಸೇವೆಗೆ ಅಗತ್ಯವಾಗಿ ಜರೂರಾಗಿರಬೇಕಾದರೆ ಅವರಿಗೆ ಬಹಳ ತೊಂದರೆಯಾಗುತ್ತದೆ.

2-00 ಪಿ.ಎಂ.

ಹಾಗೂ ಮಾನ್ಯ ಸದಸ್ಯರು ಹೇಳಿದ್ದು ಅದು ಒಂದು ಉತ್ತಮವಾದ ಸಲಹೆ. ಆದರೆ ಈಗ ಇರುವ ಪರಿಸ್ಥಿತಿಯಲ್ಲಿ ನಮಗೆ ಬೇರೆ ಇನ್ನಾವ ದಾರಿಯೂ ಇಲ್ಲ. ಈ ಬಸ್ಸುಗಳನ್ನು ಎಲೆಕ್ಷನ್ ಕಮೀಷನರ್ ಅವರಿಗೆ, ಅವರ ಒಂದು ಸೇವೆಗೆ ನಾವು ಬಸ್ಸುಗಳನ್ನು ನಾವು ಕೊಡಲೇ ಬೇಕು. ಕೆಲವು ಕಡೆ ಪೆಡ್ಡೂಲ್ ಬಸ್‌ಗಳನ್ನು ಓಡಿಸುವುದಕ್ಕೆ ತೊಂದರೆಯಾಗಿದೆ. ಆದರೂ ಕೂಡ ಎಲ್ಲಿ ಬಸ್ಸುಗಳು ಹೆಚ್ಚಾಗಿ ಓಡಿಸತಿದ್ದೆವೋ ಆ ಮಾರ್ಗಗಳಲ್ಲಿ ಸ್ವಲ್ಪ ಕಡಿಮೆ ಮಾಡಿ ಎಲ್ಲಿ ಬಸ್ಸುಗಳು ಓಡುವುದಿಲ್ಲವೋ ಅಲ್ಲಿಗೆ ಓಡಿಸಲು ವ್ಯವಸ್ಥೆ ಮಾಡಿದ್ದೇವೆ. ಆದಷ್ಟು ಮಟ್ಟಿಗೆ ಸಾರ್ವಜನಿಕರಿಗೆ ತೊಂದರೆ ಆಗದೇ ಇರುವ ಹಾಗೆ ನೋಡಿಕೊಳ್ಳಬೇಕು ಅನ್ನುವುದೇ ನಮ್ಮ ಉದ್ದೇಶ. ಆದರೆ ಅನಿವಾರ್ಯವಾದಂಥಾ ಸಂದರ್ಭದಲ್ಲಿ ಸಾರ್ವಜನಿಕರಿಗೆ ಎಷ್ಟರಮಟ್ಟಿಗೆ ತೊಂದರೆಯನ್ನು ತಪ್ಪಿಸಲಿಕ್ಕೆ ಸಾಧ್ಯವೋ, ಎಷ್ಟರ ಮಟ್ಟಿಗೆ ಸುಧಾರಣೆ ಮಾಡಲಿಕ್ಕೆ ಸಾಧ್ಯವೋ ಅಷ್ಟನ್ನು ಮಾಡಿಕೊಡಬೇಕೆಂಬುದೇ ಸರಕಾರದ ಉದ್ದೇಶವಾಗಿದೆ. ಆದುದರಿಂದ ಈ ಒಂದು ವಿಷಯ ನಮ್ಮ ರಾಜ್ಯದಲ್ಲಿ ಒಂದರಲ್ಲೇ ಅಲ್ಲ ಇಡೀ ಭಾರತ ದೇಶದಲ್ಲಿ ತೀರ್ಮಾನವಾಗಬೇಕಾದಂಥಾ ವಿಷಯ. ನಮ್ಮ ರಾಜ್ಯದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ತೆಗೆದುಕೊಂಡಿರುವುದೇ ಅಲ್ಲ, ಸ್ವಂತ ಬಸ್ಸುಗಳು ಇದ್ದರೂ ಕೂಡ ಅದನ್ನು ಎಲೆಕ್ಷನ್ ಕಮೀಷನರ್ ಅವರು ತೆಗೆದುಕೊಂಡು ಉಪಯೋಗಿಸಬಹುದು. ಈ ವಿಷಯ ಅಖಿಲ ಭಾರತ ಮಟ್ಟದಲ್ಲಿ ತೀರ್ಮಾನವಾಗಬೇಕೇ ವಿನಾ ರಾಜ್ಯ ಮಟ್ಟದಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಂಥಾದ್ದಲ್ಲ.

## Death of a Harijan boy at Chickmagalur

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೇ, ನಾನು ಸಿಂಪಿ ರೂಲು ಪ್ರಕಾರ ಒಂದು ವಿಷಯ ಕಳುಹಿಸಿದ್ದೇನೆ. ಅದು ಯಾವ ವಿಷಯ ಎಂದರೆ ಚಿಕ್ಕಮಗಳೂರಿನ ಪೋಲೀಸ್ ಠಾಣೆಯಲ್ಲಿ ಒಬ್ಬ ಹರಿಜನ ಹುಡುಗ ಸತ್ತಿರುವ ವಿಷಯ.

ಅಧ್ಯಕ್ಷರು.—ತಾವು ಈಗ ತಾನೇ ಕಳುಹಿಸಿದ್ದೀರಿ. ಅದಕ್ಕೆ ಉತ್ತರ ತರಿಸಿಕೊಂಡು ಅಜೆಂಡಾದಲ್ಲಿ ಸೇರಿಸೋಣ.

ಶ್ರೀ ಸಿ. ಎಂ. ಇಬ್ರಾಹಿಂ.—ಈ ವಿಷಯ ಸತ್ತಿರುವ ಪ್ರಶ್ನೆಯಾದುದರಿಂದ ಇದನ್ನು ಈಪೊತ್ತೆ ತೆಗೆದುಕೊಳ್ಳಬೇಕು. ನಾಳೆಯವರೆಗೆ ಇದ್ದರೆ ಏನಾಗುತ್ತದೋ ಗೊತ್ತಿಲ್ಲ. ಅವನು ಜೀವಂತನಾಗಿದ್ದರೆ ಆಮೇಲೆ ತೆಗೆದುಕೊಳ್ಳಬಹುದಾಗಿತ್ತು. ಆದುದರಿಂದ ಇದನ್ನು ಆದಷ್ಟು ಬೇಗ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ನಿಮ್ಮ ನೋಟೀಸ್ ಅನ್ನು ಸರ್ಕಾರಕ್ಕೆ ಕಳುಹಿಸಿ ನಾಳೆ ತೆಗೆದುಕೊಳ್ಳುವಂತೆ ಮಾಡುತ್ತೇನೆ.

## Non-representation of SC/ST Members in the Medical Recruitment Committees

ಶ್ರೀ ಎಸ್. ಎಸ್. ಅರಕೇರಿ —ಸ್ವಾಮಿ, ಸಿಂಪಿ ರೂಲ್ ಪ್ರಕಾರ ನಾನು ಒಂದು ನೋಟೀಸ್ ಕಳುಹಿಸಿದ್ದೇನೆ. ಅದು ಯಾವ ವಿಷಯ ಎಂದರೆ ಮೆಡಿಕಲ್ ರಿಕ್ರೂಟ್‌ಮೆಂಟ್ ಕಮಿಟಿಯಲ್ಲಿ ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರ್ಸ್ ಕೂಡ ಇಲ್ಲ. ಈಗ ಆ ಹುದ್ದೆಗಳಿಗೆ ಸೆಲೆಕ್ಷನ್ ಆಗುತ್ತಾ ಇದೆ. ಇದನ್ನು ತಾವು ಮೆಡಿಕಲ್ ಡಿಪಾರ್ಟ್‌ಮೆಂಟ್ ಬಗ್ಗೆ ಚರ್ಚೆ ಬರುತ್ತದೆ, ಆದುದರಿಂದ ಇದನ್ನು ಡಿಸ್ ಅಲೋ ಮಾಡಿದೆ ಎಂದು ಹೇಳುತ್ತೀರಿ. ಸೆಲೆಕ್ಷನ್ ಮುಗಿದು ಹೋದರೆ ಆನಂತರ ತೆಗೆದುಕೊಂಡರೆ